(ಈ) ಅಂಗನವಾಡಿ ಸಹಾಯಕಿಯರಿಗೆ ಸಹಾಯ ಧನವದಗಿಸುವ ಬಗ್ಗೆ.

+ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಸಭಾಧ್ಯಕ್ಷರೆ, ಅಂಗನವಾಡಿ ಸಹಾಯಕಿಯರು ಮತ್ತು ಅಂಗನವಾಡಿ ಕಾರ್ಯಕರ್ತರಲ್ಲಿ ಸುಮಾರು ೪೦,೦೦೦ ಜನ ಅಂಗನವಾಡಿ ಕಾರ್ಯಕರ್ತರು ಮತ್ತು ೪೦,೦೦೦ ಜನ ಸೇವಕರು ಇದ್ದಾರೆ. ಕೇಂದ್ರ ಸರ್ಕಾರದಿಂದ ಸಹಾಯಕರಿಗೆ ೫೦೦ ರೂಪಾಯಿ, ಸಹಾಯಕಿಯರಿಗೆ ಸುಮಾರು ೩೦೦ ರೂಪಾಯಿ ಕೊಡುತ್ತಿದ್ದಾರೆ. ರಾಜ್ಯ ಸರ್ಕಾರದಿಂದ ೧೦೦ ರೂಪಾಯಿ ಹೆಚ್ಚುವರಿ ಹಣ ಕೊಟ್ಟಿದ್ದೀರಿ. ಆದರೆ ಬಹಳ ಕಡಿಮೆ ಹಣವನ್ನು ಅವರಿಗೆ ಕೊಟ್ಟಿರುವುದರಿಂದ ಸುಮಾರು ಒಂದೆರಡು ತಿಂಗಳಿನಿಂದ ಅವರುಗಳು ಸತ್ಯಾಗ್ರಹ ಮಾಡುತ್ತಿದ್ದಾರೆ. ಕನಿಷ್ಠ ವೇತನ ಕೊಡುವುದರ ಜೊತೆಗೆ ಅವರ ವೇತನಕ್ಕೆ ಬಹಳ ತೊಂದರೆಯಾಗಿರುವುದರಿಂದ, ರಾಜ್ಯ ಸರ್ಕಾರ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ತಮಗೂ ಇದಕ್ಕೂ ಏನೂ ಸಂಬಂಧ ಇಲ್ಲ ಎಂದು ಹೇಳಬಹುದು. ಮಾನ್ಯ ಮುಖ್ಯ ಮಂತ್ರಿಗಳು ಮಹಿಳೆಯರ ಬಗ್ಗೆ ಬಹಳ ಆಸಕ್ತಿಯಿಂದ ಮಹಿಳೆಯರ ಜೀವನ ಬಹಳ ಕಷ್ಟದಲ್ಲಿದೆ, ಅವರಿಗೆ ಏನಾದರೂ ನ್ಯಾಯ ದೊರಕಿಸಿಕೊಡಬೇಕೆಂದು ಮಹಿಳೆಯರ ಆಯೋಗ ಮಾಡಿದ್ದು, ವಿಶೇಷವಾಗಿ ಯಾವ ಪುರುಷರೂ ಅಂಗನವಾಡಿ ಸಹಾಯಕರಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಕನಿಷ್ಠ ಅವರನ್ನು ಕರೆಸಿ ಮಾತನಾಡಿ ೪೦೦ ರೂಪಾಯಿ ಕೊಟ್ಟಿಲ್ಲಿಟ್ ಕೋಟಿ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಕನಿಷ್ಠ ೨೫೫ ಕೋಟಿ ರೂಪಾಯಿ ಕೊಡತಕ್ಕಂತಹ ವ್ಯವಸ್ಥೆ ಮಾಡಿ ದಯವಿಟ್ಟು ಅವರಿಗೆ ಇನ್ನು ಕೆಲವು ಕೆಲಸಗಳನ್ನು ನೇಮಕ ಮಾಡುವುದು ಒಳ್ಳೆಯದು. ರಾಜ್ಯ ಸರ್ಕಾರ ಅಂಗವಿಕಲರಿಗೆ ಪಾಸ್‌ಬುಕ್ ಕೊಡುತ್ತಿದೆ. ಅಂಗವಿಕಲತೆ ಯಾವ ಯಾವ ಕಾರಣಕ್ಕಾಗಿ ಆಗುತ್ತದೆ, ಇದನ್ನು ಯಾವ ರೀತಿ ತಡೆಯಬೇಕೆಂದು ತರಬೇತಿ ಕೊಟ್ಟು ಅದನ್ನು ನಿಲ್ಲಿಸತಕ್ಕಂತಹ ಕೆಲಸ ಆಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಗರ್ಭಿಣಿ ಸ್ತ್ರೀಯರು ಯಾವುದೇ ಡಾಕ್ಟರ್‌ಗಳಿಗೂ ಕೇಳದೆ ಅನಾವಶ್ಯಕವಾಗಿ ಅವರು ತೋರಿಸುವಂತಹ ಮಾತ್ರೆಗಳನ್ನು ಅಂಗಡಿಗಳಲ್ಲಿ ತೆಗೆದುಕೊಂಡು ಬಹಳ ಜನ ಅಂಗವಿಕಲರಾಗುತ್ತಿರತಕ್ಕಂತಹ ಪರಿಸ್ಥಿತಿ ಒಂದು. ಆರೋಗ್ಯದ ಬಗ್ಗೆ ನಾವು ಕೇವಲ ಆಸ್ಪತ್ರೆ ಡಾಕ್ಟರ್‌ಗಳನ್ನು ಜಾಸ್ತಿ ಮಾಡುವುದು ಆರೋಗ್ಯದ ಮುಖ್ಯವಾದ ಉದ್ದೇಶ ಅಲ್ಲ. ಆರೋಗ್ಯ ಮಂತ್ರಿಗಳು ಅಂಗನವಾಡಿ ಕಾರ್ಯಕರ್ತರಿಗೆ ಬೇಸಿಕ್ ಹೆಲ್ತ್ ಬಗ್ಗೆ ಜನರು ಯಾವ ರೀತಿ ಇರಬೇಕೆಂಬ ಬಗ್ಗೆ ತರಭೇತಿ ಕೊಟ್ಟು ಅವರ ಕೈಯಲ್ಲಿ ಕೆಲಸ ಮಾಡಿಸಬೇಕು. ಕುಷ್ಠರೋಗ ಅಪಾಯಕಾರಿ ಅಲ್ಲ. ಇದರಿಂದ ಯಾರೂ ಭಯಪಡಬೇಕಾದ ಅವಶ್ಯಕತೆ ಇಲ್ಲ. ಆ ವಿಚಾರವನ್ನು ಚರ್ಚೆ ಮಾಡಬೇಕು. ಕುಟುಂಬ ಯೋಜನೆ ಬಗ್ಗೆ ಕಡ್ಡಾಯವಾಗಿ ತಿಳುವಳಿಕೆ ಕೊಡತಕ್ಕಂತಹ ಕೆಲಸವನ್ನು ಅವರು ಜವಾಬ್ದಾರಿಯುತವಾಗಿ ವಹಿಸಿ ಕನಿಷ್ಠ ಸರ್ಕಾರ ಕರೆದು ಮಾತನಾಡಿ ೨೮ ಕೋಟಿ ರೂಪಾಯಿ ಜಾಸ್ತಿ ಸರ್ಕಾರಕ್ಕೆ ಹೊರೆಯಾಗಬೇಕು. ಈ ೪ ನಾಲ್ಕು ಕೆಲಸಗಳನ್ನು ವಹಿಸಿಕೊಡುವುದರ ಮೂಲಕ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ನಾವು ಕೊಟ್ಟಿದ್ದೆವು, ಗಮನ ಸೆಳೆಯುವ ಸೂಚನೆ ಕೊಟ್ಟರೆ ಅವರು ಡೀಟೇಲಾಗಿ ಉತ್ತರ ತಂದು ಓದಬಹುದು. ಶೂನ್ಯ ವೇಳೆಯಲ್ಲಿ ಇದು ಪ್ರಸ್ತಾಪ ಮಾಡಿದರೆ ಅದಕ್ಕೆ ಅಷ್ಟೊಂದು ಉತ್ತರ ಸಿಗುವುದಿಲ್ಲ. ಏಕೆಂದರೆ ಅವರು ಏನು ಉತ್ತರ ಕೊಡುತ್ತಾರೆ. ಅದನ್ನು ಕೇಳಿಕೊಂಡು ಸುಮ್ಮನೆ

ನಾವು ಇರಬೇಕಾಗುತ್ತದೆ. ಸರ್ಕಾರ ಮುಂದೆ ಬರಬೇಕಾಗುತ್ತದೆ. ಏಕೆಂದರೆ ಎಲ್ಲವನ್ನೂ ಸರ್ಕಾರ ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಕೆಲವೊಂದು ಡಿಮ್ಯಾಂಡ್ ಏನಿವೆ ಲೀವ್, ಮೆಟರ್ನಿಟಿ ಮತ್ತು ಬೇರೆ ಎರಡು - ಮೂರು ಕೆಲಸಗಳನ್ನು ಅವರಿಗೆ ವಹಿಸಿಕೊಟ್ಟು ನಮ್ಮಿಂದ ಏನಾದರೂ ಹಾನರರಿಯಂ ಜಾಸ್ತಿ ಮಾಡುವುದಕ್ಕೆ ಅವಕಾಶವಿದ್ದರೆ ಅದೂ ಕೂಡ ಮಾಡಬಹುದು. ಹೀಗೆ ಫೈನಾನ್ಸ್ ಮಿನಿಸ್ಟರ್ ತಾವು ಸ್ವಲ್ಪ ಆಸಕ್ತಿ ವಹಿಸಿ ಅವರನ್ನು ಕರೆಸಿಕೊಂಡು ಮಾತನಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆ. ಇಲ್ಲದಿದ್ದರೆ ಅವರ ಉತ್ತರದಿಂದ ಬಗೆಹರಿಯುವುದಲ್ಲ. ಅವರು ಏನಾದರೂ ಮಾಡಿ ನಾನು ಮುಖ್ಯ ಮಂತ್ರಿಗಳಿಗೆ ಕೇಳುತ್ತೇನೆ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇವೆ, ಅಷ್ಟು ಮಾತ್ರ ಹೇಳಬಹುದು. ಏನಾದರೂ ಸಲ್ಯೂಷನ್ ಸಿಗಬೇಕಾದರೆ ಅದು ಮುಖ್ಯ ಮಂತ್ರಿಯಿಂದ ಮತ್ತು ನಮ್ಮ ಹಣಕಾಸು ಸಚಿವರಿಂದ ಆಗುತ್ತದೆ. ಅದಕ್ಕೆ ಮುಖ್ಯ ಮಂತ್ರಿಯವರು ಮನಸ್ಸು ಮಾಡಿ ಇದಕ್ಕೆ ಏನಾದರೂ ಸ್ವಲ್ಪ ಚರ್ಚೆ ಮಾಡತಕ್ಕಂಥದ್ದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಮಹಾರಾಷ್ಟ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತರಿಗೆ ಒಂದು ಸಾವಿರ ರೂಪಾಯಿ ಕೊಡುತ್ತಿದೆ. ನಾವು ೧೦೦ ರೂಪಾಯಿ ಜಾಸ್ತಿ ಮಾಡಿದ್ದೇವೆ. ಆದರೂ ಅವರ ಪರಿಸ್ಥಿತಿ ಅತ್ಯಂತ ಹೀನಾಯವಾಗಿದೆ. ಬಹಳ ನೋವಿನ ಪರಿಸ್ಥಿತಿಯಾಗಿದೆ. ಅವರ ವೇತನವನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಬೇರೆ ರಾಜ್ಯದಲ್ಲಿ ಅವರಿಗೆ ಒಂದು ಸಾವಿರ ರೂಪಾಯಿ ಕೊಡುತ್ತಾರೆ. ನಾವು ೪೦೦-೩.೦೦ ರೂಪಾಯಿಯಲ್ಲಿ ಅವರು ಮಾಡತಕ್ಕಂತಹ ಕೆಲಸಗಳಿಗೆ ಕೊಡತಕ್ಕಂತಹ ಸಂಭಾವನೆ ಅದು ನಿಜವಾಗಿ ನೋವಿನ ಪ್ರಸಂಗ. ಸರ್ಕಾರ ಇದಕ್ಕೆ ವಿಶೇಷವಾಗಿ ಗಮನ ಹರಿಸಬೇಕು. ಚರ್ಚೆ ಮಾಡುವುದಾದರೆ ವಿರೋಧ ಪಕ್ಷದ ಸದಸ್ಯರಿಗೆ ಕರೆಯಿಸಿ ಕುಳಿತುಕೊಂಡು ಚರ್ಚೆ ಮಾಡಿ ಅದಕ್ಕೆ ಒಂದು ಸೂತ್ರವನ್ನು ಅಳವಡಿಸಿ ಅವರಿಗೆ ಅನುಕೂಲ ಮಾಡತಕ್ಕಂತಹ ವ್ಯವಸ್ಥೆ ಮಾಡೋಣವೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆದರೆ ತೀರ್ಮಾನ ಏನಾಗಿದೆ ಎಂದು ಇದುವರೆಗೆ ಗೊತ್ತಾಗಿಲ್ಲ. ಸುಮಾರು ಸಂದರ್ಭಗಳಲ್ಲಿ ಬೇಡಿಕೆ ಇಟ್ಟು ಮುಖ್ಯ ಮಂತ್ರಿಗಳು ಚರ್ಚೆ ಮಾಡಬೇಕೆಂದು ಅವರ ಮನೆ ಮುಂದೆ ಕೂಡ ಧರಣಿ ಮಾಡಿದರು. ತಾರೀಖು ಕೂಡ ನಿಗದಿ ಮಾಡಿದರು. ಆದರೆ ಇದುವರೆಗೂ ಅವರು ಏನೂ ತೀರ್ಮಾನ ತೆಗೆದುಕೊಳ್ಳಲಿಲ್ಲ. ಈಗಲಾದರೂ ಅವರ ಬೇಡಿಕೆಗಳು ಒಪ್ಪುತ್ತೀರಿ, ಅವರ ಸಮಸ್ಯೆ ಪರಿಹಾರಕ್ಕೆ ಏನಾದರೂ ಆಶ್ವಾಸನೆ ಕೊಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಕ್ವಲ್ ಪೇ ಫಾರ್ ಈಕ್ವಲ್ ವರ್ಕ್ ಎನ್ನುವುದು ಮಹಿಳೆಯರಿಗೆ ಇದೆಯೋ ಇಲ್ಲವೋ ಎನ್ನುವುದು ಒಂದು ಪ್ರಶ್ನೆ. ಪೇ ಫಿಕ್ಸೇಷನ್ ಕಮಿಟಿ ತಾವು ಏನಾದರೂ ಮಾಡಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಅಂಗನವಾಡಿ ಕಾರ್ಯಕರ್ತೆಯರು ಅಥವಾ ಸಹಾಯಕಿಯರ ಬಗ್ಗೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿರುವ ಹಾಗೆ ಅವರನ್ನು ಕರೆದು ಮಾತನಾಡುತ್ತೇವೆ. ಖರ್ಗೆಯವರು ತಿಳಿಸಿದ ಹಾಗೆ ಹಣಕಾಸಿನ ಸಚಿವರಿಗೆ ಹೇಳಿ ಎಷ್ಟು ಜಾಸ್ತಿ

ಮಾಡುವುದಕ್ಕೆ ಸಾಧ್ಯ ಇದೆ ಅನ್ನುವುದನ್ನು ನಿಗದಿ ಮಾಡುತ್ತೇವೆ. ಅವರಿಗೆ ಈ ಚಳುವಳಿ ಮಾರ್ಗ ಬಿಡುವುದಕ್ಕೆ ತಾವುಗಳೂ ಸಹ ಅವರಿಗೆ ಸ್ವಲ್ಪ ತಿಳುವಳಿಕೆ ಹೇಳಬೇಕು. ಎಲ್ಲದಕ್ಕೂ ಚಳುವಳಿ ಹೋದ ಸಾರಿ ಬಂದಾಗ ಕರೆಯಿಸಿ ಮಾತನಾಡಿ ಲೀವ್ ಬಗ್ಗೆ ಕೆಲವು ಎಲ್ಲಿ ಫೈನಾನ್ಸ್ ಇನ್‌ವಾಲ್ವ್‌ಮೆಂಟ್ ಆಗಿಲ್ಲ ಅಂತಹವುಗಳನ್ನು ಕನ್‌ಸಿಡರ್ ಮಾಡಿ ಮಾಡುತ್ತೇವೆಂದು ಹೇಳಿದ್ದೆವು. ಮಹಾರಾಷ್ಟ್ರದಲ್ಲಿ ಎಷ್ಟು ಕೊಡುತ್ತಾರೆ, ತಮಿಳುನಾಡಿನಲ್ಲಿ ಎಷ್ಟು ಕೊಡುತ್ತಾರೆಂಬುದು ಅಲ್ಲ. ಇವತ್ತು ನಾವು ಅವರ ಕೆಲಸಗಳಿಗೆ ಇನ್ನು ಸ್ವಲ್ಪ ಹೆಚ್ಚು ಹಣ ಕೊಡಬೇಕು ಎನ್ನುವ ಮಾತನ್ನು ಒಪ್ಪುತ್ತೇನೆ. ಎಷ್ಟು ಎನ್ನುವುದನ್ನು ಹಣಕಾಸಿನ ಸಚಿವರಿಗೆ ಕರೆಯಿಸಿ ಮಾತನಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಂದು ವೇಳೆ ನೀವು ಏನಾದರೂ ಎನ್‌ಹ್ಯಾನ್ಸ್‌ಮೆಂಟ್ ಮಾಡಲಿಲ್ಲ ಎಂದರೆ ಖಂಡಿತವಾಗಿ ಮಕ್ಕಳಿಗೆ ಕೊಡುವ ಅನ್ನ ಅದನ್ನು ಇನ್ಸ್‌ಪೆಕ್ಟರ್‌ನಿಂದ ಹಿಡಿದು ಎಲ್ಲರೂ ಹೊಡೆದು ತಿನ್ನತಕ್ಕಂತಹ ವ್ಯವಸ್ಥೆ ಆಗುತ್ತದೆ. ನ್ಯಾಯವಾಗಿ ನೀವು ಅವರಿಗೆ ಬೇರೆ ಯಾವುದಾದರೂ ಅಡಿಷನಲ್ ವರ್ಕ್ ಫಹಿಸಿ.

ಅಧ್ಯಕ್ಷರು : ಮುಖ್ಯ ಮಂತ್ರಿಗಳು ಪಾಸಿಟೀವ್ ಆಗಿ ಹೇಳಿದರು. ಅವರ ಎಲ್ಲಾ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಹೆಚ್ಚು ಮಾಡಬೇಕೆಂದು ಮನವರಿಕೆ ಆಗಿದೆ. ಎಷ್ಟು ಮಾಡಬೇಕೆಂದು ಹಣಕಾಸಿನ ಸಚಿವರ ಜೊತೆ ಮಾತನಾಡಿ ನಂತರ ಮಾಡುತ್ತೇನೆಂದು ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಯಾವಾಗಲೂ ನಮ್ಮ ಸಮಸ್ಯೆಗೆ ಸ್ಪಂದಿಸುತ್ತಾರೆಂದು ನಮಗೆ ಗೊತ್ತು. ಮೊನ್ನೆ ಇಂಟರ್‌ನ್ಯಾಷನಲ್ ಮಿಮೆನ್ಸ್ ಡೇ ದಿವಸ ಅವರು ಯಾವುದೇ ನಾಲ್ಕು ಜನ ಮಹಿಳೆಯರು ಹೋದರೆ ಅವರ ಸಮಸ್ಯೆ ಬಗೆಹರಿಸುತ್ತೇವೆಂದು ಹೇಳಿದ್ದಾರೆ. ಸುಮಾರು ೪೦ ಸಾವಿರ ಮಹಿಳೆಯರ ಸಮಸ್ಯೆಯನ್ನು ಮಾನ್ಯ ಮುಖ್ಯಮಂತ್ರಿಗಳು ಬಗೆಹರಿಸುತ್ತಾರೆ ಎಂಬ ಆತ್ಮವಿಶ್ವಾಸ ನಮಗಿದೆ. ಇವೊತ್ತೇ ಮುಖ್ಯಮಂತ್ರಿಗಳು ಮೊಟ್ಟಮೊದಲನೆಯದಾಗಿ ಪಾಸಿಟಿವ್ ರಿಪ್ಲೈಯನ್ನು ಕೊಟ್ಟಿರುವುದು. ಸಾಮಾನ್ಯವಾಗಿ ಅವರು ನೋಡೋಣ, ಮಾಡೋಣ ಎಂದು ಹೇಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳಿಗೆ ಮಹಿಳೆಯರ ಬಗ್ಗೆ ಕರುಣೆ ಮತ್ತು ವಿಶ್ವಾಸವಿದೆ. ಆ ಬಗ್ಗೆ ನಮ್ಮದೇನೂ ತಕರಾರಿಲ್ಲ. ಆದುದರಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನವನ್ನು ಹೆಚ್ಚು ಮಾಡುತ್ತಾರೆ ಎನ್ನುವ ಭರವಸೆ ನಮಗಿದೆ. ಅದನ್ನು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಅದನ್ನು ಬೇಗ ಕಾರ್ಯರೂಪಕ್ಕೆ ತಂದರೆ ಒಳ್ಳೆಯದು ಎನ್ನುವುದು ನಮ್ಮ ಅಭಿಪ್ರಾಯ.

ಶ್ರೀ ಜೆ. ಹೆಚ್. ಪಟೇಲ್ : ಗೌರವಧನವನ್ನು ಹೆಚ್ಚು ಕೊಡಬೇಕು ಎನ್ನುವುದು ನನ್ನ ಮನಸ್ಸಿಗೆ ಖಾತರಿಯಾದ ಕಾರಣದಿಂದ ಹೆಚ್ಚು ಮಾಡುವುದಾಗಿ ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಭರವಸೆ ಈಡೇರಬೇಕು.

ಅಧ್ಯಕ್ಷರು : ನಮಗೂ ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಇದೆ. ಹೆಣ್ಣು ಮಕ್ಕಳ ವಿಚಾರದಲ್ಲಿ ಸುಮ್ಮನೆ ಅವರು ಏನನ್ನೂ ಹೇಳುವುದಿಲ್ಲ. ಆ ರೀತಿಯಲ್ಲಿ ಭರವಸೆ ಕೊಟ್ಟರೆ ಆ ಭರವಸೆಯಂತೆ ಅವರು ನಡೆದುಕೊಳ್ಳುತ್ತಾರೆ ಎನ್ನುವ ವಿಶ್ವಾಸ ನಮಗೆ ಇದೆ.